144 ನೇ ಅಧಿವೇಶನ

ನಿ-330

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ 330 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿರವರ ಹೇಳಿಕೆ**

**ವಿಷಯ:**

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಉಲ್ಲಾಳು ಗ್ರಾಮದ ಸರ್ವೆ ನಂ.14 ರಿಂದ 23, 51, 52, 53 ರಲ್ಲಿ ಜಮೀನುಗಳನ್ನು ಸರ್.ಎಂ.ವಿಶ್ವೇಶ್ವರಯ್ಯ 2ನೇ ಹಂತದ ಬಡಾವಣೆ ರಚನೆಗಾಗಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ, ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:1853/2003ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ:03.09.2004ರ ಆದೇಶದಲ್ಲಿ ಪ್ರಶ್ನಿತ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಿ, ಅಧಿಸೂಚನೆಯನ್ನು ಹಿಂಪಡೆಯುವಂತೆ ಭೂಮಾಲೀಕರ ಪರವಾಗಿ ತೀರ್ಪು ನೀಡಿದೆ. ತದನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಸಮಿತಿ ಸಭೆಯ ಠರಾವು ಸಂಖ್ಯೆ 126/2005) ಸೇರಿ ಸದರಿ ಜಮೀನಿನಲ್ಲಿ ಅವಶ್ಯವಿರುವ ಜಮೀನನ್ನು ರಸ್ತೆ ಉಪಯೋಗಕ್ಕಾಗಿ ಮಾತ್ರ ಬಳಸಿಕೊಂಡು ಉಳಿದ ಜಮೀನನ್ನು ಕೈಬಿಡಲು ತೀರ್ಮಾನಿಸಲಾಗಿದೆ. ಪ್ರಾಧಿಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಪರಿಹಾರ ಹಣವನ್ನು ಸಿವಿಲ್ ನ್ಯಾಯಾಲಯಕ್ಕೆ ಜಮಾ ಮಾಡಿ, ನಂತರ ಸಿವಿಲ್ ನ್ಯಾಯಾಲಯದಿಂದ ಭೂಪರಿಹಾರ ಹಣವನ್ನು ವಿಶೇಷ ಭೂಸ್ವಾಧೀನಾಧಿಕಾರಿಯವರು ಹಿಂಪಡೆದು ದಿನಾಂಕ:11.11.2008 ರಂದು ಸದರಿ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ ಎಂದು ಹಿಂಬರಹ ನೀಡಿರುತ್ತಾರೆ. ಇದರ ಆಧಾರದ ಮೇಲೆ ಭೂಮಾಲೀಕರು ಸದರಿ ಜಮೀನುಗಳನ್ನು ದಿನಾಂಕ:11.11.2008 ರಂದು ಭೂಪರಿವರ್ತನೆ ಮಾಡಿ, ಬಿ.ಬಿ.ಎಂ.ಪಿ. ಕಂದಾಯ ಪರಿಮಿತಿಯೊಳಗೆ ತಂದಿರುತ್ತಾರೆ. ಮುಂದುವರೆದು 2015 ರಲ್ಲಿ ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ, ಸದರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವುದನ್ನು ಗೆಜೆಟ್ ಪ್ರಕಟಣೆ 48(1) ಅಧಿಸೂಚನೆ ಹೊರಡಿಸುವಂತೆ ಕೋರಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:33742-33757/2015ರಂದು ಆದೇಶವಾಗಿರುತ್ತದೆ. ನಂತರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ಪ್ರಶ್ನಿಸಿ, ಸರ್ಕಾರವು ರಿಟ್ ಅಪೀಲು ಸಲ್ಲಿಸಿದೆ. (ಸಂಖ್ಯೆ: 4563/2016) ಸದರಿ ಜಮೀನಿನಲ್ಲಿ ರಸ್ತೆ, ಚರಂಡಿ ಮತ್ತು ಕೆಲವು ನಿವೇಶನಗಳನ್ನು ನಿರ್ಮಿಸಿದ್ದು, ಸದರಿ ಜಮೀನಿಗೆ ಪರಿಹಾರ ನೀಡುತ್ತೇವೆಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಮತ್ತು ಭೂಮಾಲೀಕರೊಂದಿಗೆ ಒಡಂಬಡಿಕೆ ಮಾಡಿಕೊಂಡು ಜಂಟಿ ಮೆಮೋವನ್ನು ಕೋರ್ಟ್‌ಗೆ ಸಲ್ಲಿಸಿರುತ್ತಾರೆ. ಕೋರ್ಟ್‌ಗೆ ಸಲ್ಲಿಸಿರುವ ಜಂಟಿ ಮೆಮೋನಲ್ಲಿ ಸದರಿ ಮೇಲ್ಮನವಿಯನ್ನು ಹಿಂಪಡೆದು, ಪ್ರಕರಣವನ್ನು ಇತ್ಯರ್ಥಗೊಳಿಸಿ 02 ತಿಂಗಳಲ್ಲಿ (ದಿನಾಂಕ:09.10.2018 ರ ಸರ್ಕಾರದ ಆದೇಶದಂತೆ) ಭೂಮಾಲೀಕರಿಗೆ ಮಾರುಕಟ್ಟೆ ಮೌಲ್ಯದಂತೆ ಪರಿಹಾರ ನೀಡುತ್ತೇವೆಂದು ತಿಳಿಸಿರುತ್ತಾರೆ. ಇಷ್ಟೆಲ್ಲ ಪ್ರಕ್ರಿಯೆ ಆಗಿದ್ದರೂ ಇದುವರೆವಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಮಾಲೀಕರಿಗೆ ಯಾವುದೇ ಪರಿಹಾರ ನೀಡದೇ ತುಂಬಾ ಅನ್ಯಾಯವಾಗಿರುವ ಬಗ್ಗೆ ಈ ಹಿಂದೆ ಚರ್ಚೆ ಆಗಿದ್ದು ಸರ್ಕಾರವು ಈ ವಿಷಯದ ಬಗ್ಗೆ ಮುಂದಿನ 15 ರಿಂದ 30 ದಿನಗಳಲ್ಲಿ ಸಮಸ್ಯೆಯನ್ನು ಬಗೆಹರಿಸುವುದಾಗಿ ಹೇಳಿಕೆ ನೀಡಿದ್ದರೂ ಇದುವರೆವೆಗೂ ಸಹ ಈ ಸಮಸ್ಯೆ ಬಗೆಹರಿಯದೆ ಇರುವ ಬಗ್ಗೆ.

****

**ಉತ್ತರ:**

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಉಲ್ಲಾಳು ಗ್ರಾಮದ ಸರ್ವೆ ನಂ.14 ರಲ್ಲಿ 3 ಎಕರೆ, ಸರ್ವೆ ನಂ.15 ರಲ್ಲಿ 1 ಎಕರೆ 31 ಗುಂಟೆ, ಸರ್ವೆ ನಂ.16 ರಲ್ಲಿ 1 ಎಕರೆ 12 ಗುಂಟೆ, ಸರ್ವೆ ನಂ.17 ರಲ್ಲಿ 1 ಎಕರೆ 11 ಗುಂಟೆ, ಸರ್ವೆ ನಂ.18 ರಲ್ಲಿ 1 ಎಕರೆ 22 ಗುಂಟೆ, ಸರ್ವೆ ನಂ. 19 ರಲ್ಲಿ 00-38 ಗುಂಟೆ, ಸರ್ವೆ ನಂ.20 ರಲ್ಲಿ 1 ಎಕರೆ 13 ಗುಂಟೆ, ಸರ್ವೆ ನಂ.21 ರಲ್ಲಿ 8 ಎಕರೆ 15 ಗುಂಟೆ ಪೈಕಿ 7 ಎಕರೆ 15 ಗುಂಟೆ, ಸರ್ವೆ ನಂ.22 ರಲ್ಲಿ 1 ಎಕರೆ 02 ಗುಂಟೆ ಮತ್ತು ಸರ್ವೆ ನಂ.51 ರಲ್ಲಿ 1 ಎಕರೆ 15 ಗುಂಟೆ, ಸರ್ವೆ ನಂ.52 ರಲ್ಲಿ

00–31 ಗುಂಟೆ ಮತ್ತು ಸರ್ವೆ ನಂ.53 ರಲ್ಲಿ 1 ಎಕರೆ 04 ಗುಂಟೆ ಜಮೀನುಗಳನ್ನು ಪ್ರಾಧಿಕಾರವು ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಗೆ ಭೂಸ್ವಾಧೀನಪಡಿಸಲು ಹೊರಡಿಸಿದ್ದ ಬಿಡಿಎ ಕಾಯ್ದೆ 1976ರ ಕಲಂ 19(1) ರಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ/654/ಎಂಎನ್‌ಎಕ್ಸ್/2002 ದಿನಾಂಕ:31.10.2002 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನುಗಳಿಗೆ ಐತೀರ್ಪು ಅನುಮೋದನೆಯಾಗಿದ್ದು, ದಿನಾಂಕ:24.01.2003, 27.01.2003, 24.01.2003. 24.01.2003 ಮತ್ತು 27.01.2003 ರಂದು ಕ್ರಮವಾಗಿ ಜಮೀನುಗಳನ್ನು ಸುರ್ಪದನ್ನು ಪಡೆದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ.

ಸದರಿ ಜಮೀನುಗಳ ಭೂಸ್ವಾಧೀನವನ್ನು ಪ್ರಶ್ನಿಸಿ, ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:1853/2003ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ: 03.09.2004 ಮತ್ತು 42483–517/2002 ಮತ್ತಿತರೆ ರಿಟ್ ಅರ್ಜಿಗಳ ಮೇಲೆ ದಿನಾಂಕ:30.09.2004ರಂದು ನೀಡಿರುವ ಆದೇಶದಂತೆ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:125/2005 ರ ನಿರ್ಣಯದಂತೆ ಉಲ್ಲಾಳ ಗ್ರಾಮದ ಸರ್ವೆ ನಂ.14 ರಿಂದ 23 ಹಾಗೂ 51 ರಿಂದ 53 ರಲ್ಲಿನ ಜಮೀನುಗಳನ್ನು ಪ್ರಾಧಿಕಾರದ ರಸ್ತೆಗಾಗಿ ಸುಮಾರು 4 ಎಕರ ಅಥವಾ ಅಳತೆ ಮಾಡಿಸಿ ರಸ್ತೆಗಾಗಿ ಅವಶ್ಯವಿರುವ ಜಮೀನನ್ನು ಪಡೆದು, ಉಳಿದ ಜಮೀನುಗಳನ್ನು ಭೂಸ್ವಾಧೀನದಿಂದ ಹೊರತುಪಡಿಸಲು ತೀರ್ಮಾನಿಸಿ, ಸದರಿ ಜಮೀನುಗಳನ್ನು ಭೂಸ್ವಾಧೀನದಿಂದ ಕೈಬಿಡಲು ಭೂಸ್ವಾಧೀನ ಕಾಯ್ದೆ 48(1) ರನ್ವಯ ಅಧಿಸೂಚನೆಯನ್ನು ಹೊರಡಿಸಲು ದಿನಾಂಕ:22.06.2006 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ತದನಂತರ ಪ್ರಾಧಿಕಾರದ ವಿಷಯ ಸಂಖ್ಯೆ:125/2005 ದಿನಾಂಕ:23.08.2005 ರ ತೀರ್ಮಾನದಲ್ಲಿ ಆದ ವಿಷಯವನ್ನು ಮರುಮಂಡಿಸಲು ಪ್ರಸ್ತಾಪ ಬಂದ ಮೇರೆಗೆ ವಿಷಯ ಸಂಖ್ಯೆ:24/2010 ರಂತೆ ದಿನಾಂಕ:10.02.2010 ರಂದು ಮಂಡಿಸಲಾಗಿತ್ತು. ಪ್ರಾಧಿಕಾರದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

> **ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಚರ್ಚೆಯ ನಂತರ ಸೋಣ್ಣೇನಹಳ್ಳಿ, ರಾಮಸಂದ್ರ ಗ್ರಾಮಗಳಲ್ಲಿನ ಉಳಿಕೆ ವಿಸ್ತೀರ್ಣವಾದ 40 ಎಕರೆ 27 ಗುಂಟೆ ಜಮೀನು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶಗಳಲ್ಲಿನ ಮಾರ್ಗಸೂಚಿಯಡಿಯಲ್ಲಿ ಬರುವ ಕಾರಣ, ಸದರಿ ಜಮೀನುಗಳನ್ನು ಭೂಸ್ವಾಧೀನ ಕಾಯ್ದೆ 48(1) ರನ್ವಯ ಪ್ರಾಧಿಕಾರದ ಭೂಸ್ವಾಧೀನ ಅಧಿಸೂಚನೆಯಿಂದ ಕೈಬಿಡುವಂತೆ ಈಗಾಗಲೇ ಸರ್ಕಾರವನ್ನು ಕೋರಿದ್ದರೂ ಇನ್ನು ಆದೇಶವನ್ನು ಹೊರಡಿಸಿಲ್ಲವಾದ ಕಾರಣ, ಈ ಬಗ್ಗೆ ಸರ್ಕಾರದ ಮಾರ್ಗದರ್ಶನವನ್ನು ಕೋರಿ ದಿನಾಂಕ:08.04.2010 ರಂದು ಪ್ರಾಧಿಕಾರದಿಂದ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.**

ಸದರಿ ಜಮೀನುಗಳ ಭೂಪರಿಹಾರ ಹಣವನ್ನು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಠೇವಣಿ ಮಾಡಲಾಗಿದ್ದು, ಮೇಲ್ಕಂಡ ಪ್ರಾಧಿಕಾರದ ಸಭೆಯ ತೀರ್ಮಾನದ ಹಿನ್ನೆಲೆಯಲ್ಲಿ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದ್ದ ಭೂಪರಿಹಾರ ಹಣವನ್ನು ಬಡ್ಡಿ ಸಹಿತ ಪ್ರಾಧಿಕಾರಕ್ಕೆ ವಾಪಸ್ಸು ನೀಡುವಂತೆ ರಿಜಿಸ್ಟ್ರಾರ್ ನಗರ ಸಿಟಿ ಸಿವಿಲ್ ನ್ಯಾಯಾಲಯ ರವರಿಗೆ ದಿನಾಂಕ:04.01.2006 ರಂದು ಪತ್ರವನ್ನು ಬರೆಯಲಾಗಿದೆ. ಸದರಿ ಜಮೀನುಗಳ ಭೂಪರಿಹಾರವನ್ನು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದ ಎಲ್‌ಎಸಿ ನಂ.404/2004, 125/2014, 172/2004 ಮತ್ತು ಇತರೆ ಆದೇಶಗಳನ್ವಯ ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದ್ದ ಭೂಪರಿಹಾರದ ಹಣವನ್ನು ಪ್ರಾಧಿಕಾರಕ್ಕೆ ವಾಪಸ್ಸು ಪಡೆಯಲಾಗಿದೆ.

ಸದರಿ ಜಮೀನುಗಳಿಗೆ ಸಂಬಂಧಿಸಿದ ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:33742-33757/2015ರ ಪ್ರಕರಣಗಳಲ್ಲಿ ಸದರಿ ಜಮೀನುಗಳು ಪ್ರಾಧಿಕಾರದ ಸ್ವಾಧೀನದಲ್ಲಿ ಮುಂದುವರೆಯುತ್ತಿರುವ ಬಗ್ಗೆ ಭೂಸ್ವಾಧೀನವನ್ನು ಪ್ರಶ್ನಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಂಖ್ಯೆ:4563/2016 ಸಲ್ಲಿಸಿದ್ದು, ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಪ್ರಸ್ತುತ ಇತ್ಯರ್ಥವಾಗದೆ ಬಾಕಿ ಇರುತ್ತದೆ. ಸದರಿ ರಿಟ್ ಅರ್ಜಿಯ ವಿಚಾರಣಾ ಸಂದರ್ಭದಲ್ಲಿ ಪ್ರಾಧಿಕಾರದಿಂದ ಮೆಮೋ ಸಲ್ಲಿಸಲಾಗಿದ್ದು, ಮೇಲ್ಕಂಡ ಜಮೀನುಗಳಲ್ಲಿ ರಸ್ತೆಗಾಗಿ ಉಪಯೋಗಿಸಿಕೊಂಡಿರುವ 5 ಎಕರೆ 18 ಗುಂಟೆ ಪೈಕಿ 24 ಗುಂಟೆ ಜಮೀನು ಖರಾಬ್ ಆಗಿದ್ದು ಉಳಿಕೆ 4 ಎಕರೆ 34 ಗುಂಟೆ ಜಮೀನಿಗೆ ಭೂಪರಿಹಾರವನ್ನು ನೀಡಲಾಗುವುದು ಎಂದು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಜಂಟಿ ಮೆಮೋ ಸಲ್ಲಿಸಲಾಗಿರುತ್ತದೆ.

ಪ್ರಾಧಿಕಾರವು ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ:4563/2016ರ ಅಂತಿಮ ಆದೇಶಕ್ಕೆ ಒಳಪಟ್ಟು ಕಾನೂನು ರೀತಿಯಲ್ಲಿ ನಿಯಮಾನುಸಾರ ಭೂಮಾಲೀಕರಿಗೆ ಪರಿಹಾರವನ್ನು ಪಾವತಿಸಲಾಗುವುದು. ಸದರಿ ನ್ಯಾಯಾಲಯಗಳ ಆದೇಶದ ವಿರುದ್ಧ ಪ್ರಾಧಿಕಾರದಿಂದ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಹಾಗೂ ಈ ಬಗ್ಗೆ ಜಂಟಿ ಮೆಮೋವನ್ನು ಪ್ರಾಧಿಕಾರವು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಈಗಾಗಲೇ ಸದರಿ ವಿಷಯವನ್ನು ಸರ್ಕಾರದಲ್ಲಿ ಪರಾಮರ್ಶಿಸಲಾಗುತ್ತಿದ್ದು ಜಂಟಿ ಮೆಮೋ ಬಗ್ಗೆ ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಕೋರಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ಅಡ್ವೋಕೇಟ್ ಜನರಲ್‌ರವರು ಸದರಿ ಜಂಟಿ ಮೆಮೋ ಸಲ್ಲಿಸಲು ಕಾರಣಗಳನ್ನು ಮತ್ತು ಸದರಿ ಪ್ರಸ್ತಾವನೆ ಹೇಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುಕೂಲಕರವಾಗಿರುತ್ತದೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿವರಣೆ ಪಡೆಯುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುಕೂಲಕರ ಮತ್ತು ಹಿಂದಿನ ಭೂಮಾಲೀಕರಿಗೆ ಸಮ್ಮತವಾಗಿರುವ ರೀತಿಯಲ್ಲಿ ಭೂಪರಿಹಾರ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ಶೀಘ್ರವಲ್ಲಿಯೇ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಂಖ್ಯೆ: ನಅಇ 238 ಬೆಂಭೂಸ್ವಾ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ